



# ಕಳಚೆ ಕಲ್ಲುಗಳು

■ ಚಿತ್ರ– ಬರಹ: **ಆಶಾ ಕೆರೆಗದ್ದೆ**

**ಕು**ತೂಹಲದ ಮೂಡಿಸುವ ಕಲ್ಲುಗಳ ಸಾಲುಗಳು ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನ ಕಳಚೆಯಲ್ಲಿವೆ. ದೇಶ–ವಿದೇಶದ ಗಮನ ಸೆಳೆದಿರುವ ಯಾಣದ ಮಾದರಿಯಲ್ಲಿ ಇಲ್ಲಿ ಶಿಲೆಗಳು ರೂಪಿತವಾಗಿದ್ದು ಪ್ರವಾಸಿಗರನ್ನು ಸೆಳೆಯುವಂತಿವೆ.

ನೈಸರ್ಗಿಕ ರಮಣೀಯವಾದ ಕಳಚೆ, ಬೆಟ್ಟಗುಡ್ಡಗಳಿಂದ ಆವೃತ್ತವಾದ ಊರು. ಯಲ್ಲಾಪುರ ಪಟ್ಟಣದಿಂದ 30 ಕಿ.ಮೀ ದೂರದಲ್ಲಿದೆ. ರಾಷ್ಟ್ರೀಯ ಹೆದ್ದಾರಿ 63ರಲ್ಲಿ 10 ಕಿ.ಮೀ ದೂರದ ಚಿನ್ನಾಪುರದವರೆಗೆ ಸಾಗಬೇಕು. ಅಲ್ಲಿಂದ ಕೈಗಾ ರಸ್ತೆಯಲ್ಲಿ ತೇಲಂಗಾರ, ವಜ್ರಳ್ಳಿ ಮೂಲಕ ಮುನ್ನಡೆದರೆ ತಳಕೆಬ್ಬೈಲ್ ಕ್ರಾಸ್ ಸಿಗುತ್ತದೆ. ಅಲ್ಲಿ ಬಲಕ್ಕೆ ತಿರುಗಿ ಪಯಣಿಸಿದರೆ ಸಿಗುವ ಊರೇ ಕಳಚೆ.

ಇದೇ ಮಾರ್ಗದಲ್ಲಿ ಕೈಗಾ, ಕಾರವಾರ ಕಡೆಯಿಂದಲೂ ಇಲ್ಲಿಗೆ ಬರಬಹುದು. ಆದರೆ ತೀರಾ ಇಕ್ಕಟ್ಟಾದ ಹಾಗೂ ಸಾಕಷ್ಟು ತಿರುವುಗಳಿರುವ ಈ ಮಾರ್ಗದಲ್ಲಿ ಸಾಗುವುದು ಒಂದು ಸಾಹಸವೇ ಸರಿ.

ಏಕಶಿಲೆಯ ವಿಸ್ಮಯ: ದಟ್ಟವಾದ ಕಾಡಿನ ನಡುವಿರುವ ಕಳಚೆ ಪ್ರದೇಶದಲ್ಲಿ ಸುತ್ತಾಡ ತೊಡಗಿದರೆ ಆರಂಭದಲ್ಲಿ ಕಾಣಸಿಗುವುದು ನೂರಾರು ಅಡಿ ಎತ್ತರದ ಏಕಶಿಲಾ ಕಲ್ಲು. ಇದು ಕಳಚೆಕಲ್ಲು. ರಸ್ತೆ ಬದಿಯಲ್ಲಿಯೇ ನೆಟ್ಟಂತಿರುವ ಎತ್ತರದ ಈ ಕಲ್ಲನ್ನು ನೋಡುವುದೇ ಒಂದು ರೋಮಾಂಚನ. ಇದನ್ನು ಎತ್ತರದಿಂದ ನೋಡುವುದಕ್ಕೆ ಅರಣ್ಯ ಇಲಾಖೆ ವೀಕ್ಷಣಾ ಗೋಪುರ ನಿರ್ಮಿಸಿದೆ. ಹತ್ತಾರು ಮೆಟ್ಟಿಲುಗಳನ್ನು ಏರಿ ಸಾಗಿದರೆ ಮರಗಿಡಗಳ ನಡುವೆ ನಿಲ್ಲಿಸಿದಂತೆ ಗೋಚರವಾಗುವ ನಿಸರ್ಗದ ಈ ಕಲ್ಲಿನ ಸೊಬಗನ್ನು ಕಣ್ತುಂಬಿಕೊಳ್ಳಬಹುದು.

ಸಮೀಪದ ಕೊಡಸಳ್ಳಿಯಲ್ಲಿ ಕಾಳಿ ನದಿಗೆ ಹಾಕಿರುವ ಅಣೆಕಟ್ಟಿನ ಹಿನ್ನೀರಿನ ಸೊಬಗನ್ನೂ ಸವಿಯಬಹುದು. ಅನತಿ ದೂರ ಸಾಗಿದರೆ ಇನ್ನೊಂದು ವಿಸ್ಮಯ– ಅಡಕೆ ತೋಟಗಳ ಅಂಚಿನಲ್ಲಿ ಸಾಲುಸಾಲಾಗಿ ಧರೆಗೆ ಕಲ್ಲುಗಳ ರಾಶಿ ಹರಡಿಕೊಂಡಿದೆ. ಇವೂ ಯಾಣದ ಮಾದರಿಯ ಶಿಲೆಗಳನ್ನು ಹೋಲುತ್ತವೆ.